ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31–03–2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಶಿಕ್ಷಣ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 483567.95 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5146.94 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನುವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕೆಂದಿದ್ದೆ.

ಅಧ್ಯಕ್ಷರು: ಇದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾಳೆ ಬೇಡ ಸರ್. ದಯವಿಟ್ಟು ಅರ್ಜೆಂಟ್ ಇದೆ ಸರ್.

ಶ್ರೀ ವಾಟಾಳ್ ನಾಗರಾಜ್: ಅವರಿಗೆ ಅವಕಾಶ ಕೊಡಿ ಸರ್.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸರ್, ಈ ವಿಷಯ ಬಹಳ ಅರ್ಜೆಂಟ್ ಇದೆ ಸರ್.

ಅಧ್ಯಕ್ಷರು: ಶ್ರೀ ಶ್ರೀರಾಮರೆಡ್ಡಿಯವರೆ, ನಿಜ. ಬೇಡಿಕೆಗಳ ಮಂಡನೆ ಮಾಡಬೇಕೆಂದು ನೀವು ಹೇಳಿ ಈಗ ಮಂಡನೆ ಆಗಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಂಡನೆ ಆಗಿದೆ ಸರಿ. ಈಗ ತಾವು ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಆ ಮೇಲೆ ಬೇಡಿಕೆಗಳ ಮೇಲಿನ ಚರ್ಚೆಯನ್ನು ಪ್ರಾರಂಭಿಸೋಣ. ಇವತ್ತು ದಯವಿಟ್ಟು ಅವಕಾಶ ಕೊಡಿ. ಭಾರೀ ಗಂಭೀರವಾದ ವಿಚಾರ ಸರ್. ಶಿಡ್ಲಘಟ್ಟದಲ್ಲಿ ಅತ್ಯಾಚಾರ ನಡೆದಿರತಕ್ಕಂಥದ್ದು, ಮಾನಭಂಗ ನಡೆದಿರ ತಕ್ಕಂಥದ್ದು

ಅಧ್ಯಕ್ಷರು: ತಮಗೆ ನಾಳೆ ಅವಕಾಶ ಕೊಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇಲ್ಲ ಸರ್. ದಯವಿಟ್ಟು ಇವತ್ತು ಅವಕಾಶ ಕೊಡಿ ಸರ್.

ಅಧ್ಯಕ್ಷರು: ಈಗ ಬೇಡಿಕೆಗಳ ಮಂಡನೆ ಆಗಿದೆ.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಅವರಿಗೆ ಈಗ ಎರಡು ನಿಮಿಷ ಅವಕಾಶ ಕೊಡಿ. ಬಹಳ ಸೀರಿಯಸ್ matter ಇದೆ.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ಬಹಳ ಸೀರಿಯಸ್ ಮ್ಯಾಟರ್ ಇದೆ. ತಾವು ಹಿರಿಯರಿದ್ದು ಏಕೆ ಹೀಗೆ ಹಿಂದೆ ಮುಂದೆ ನೋಡುತ್ತೀರಿ? ದಯಮಾಡಿ ಇದು ಬಹಳ ಸೀರಿಯಸ್ ವಿಷಯವಾಗಿದೆ.

ಅಧ್ಯಕ್ಷರು: ವಿಷಯ ಮಂಡನೆಯಾಗಿದೆ. ಅದರ ಮೇಲೆ ಈಗ ಚರ್ಚೆಯಾಗಲಿ. ದಯಮಾಡಿ ನಾಳೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಅದು ಒಂದೇ ಒಂದು ವಿಷಯಕ್ಕೆ ಅವಕಾಶ ಕೊಡಿ ಸರ್.

ಅಧ್ಯಕ್ಷರು: No,no. ಈಗ ಬೇಡ ನಾಳೆ ಕೊಡುತ್ತೇನೆ. Please

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಕ್ಷಣ ಅವರು ಹೇಳಿಬಿಡುತ್ತಾರೆ.

ಅಧ್ಯಕ್ಷರು: ಅಲ್ಲ. ತಾವು ಅರ್ಥಮಾಡಿಕೊಳ್ಳಿ. ಈಗ ಬೇಡಿಕೆ ವಿಷಯ ಮಂಡನೆ ಆಗಿದೆ. ಅದರ ಬಗ್ಗೆ ಚರ್ಚೆ ನಡೆಯಲಿ. ನಾಳೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ದಯವಿಟ್ಟು ಇವತ್ತು ಅವಕಾಶ ಕೊಡಿ ಸರ್.

ಶ್ರೀ ವಾಟಾಳ್ ನಾಗರಾಜ್: ಬಹಳ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡುತ್ತಾರೆ. ದಯವಿಟ್ಟು ಎರಡು ನಿಮಿಷ ಅವರಿಗೆ ಅವಕಾಶ ಕೊಡಿ ಸರ್.

(ಗೊಂದಲ)

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ಅದು ಬಹಳ ಅರ್ಜೆಂಟ್ ಇದೆ ಸರ್.

ಶ್ರೀ ಬಿ.ಎಸ್.ಯಡಿಯೂರಪ್ಪ: ಇವತ್ತು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಹಳ ಸದಸ್ಯರದು ಬಹಳ ಪ್ರಮುಖವಾದ ವಿಷಯಗಳು ಇವೆ.

ಅಧ್ಯಕ್ಷರು: ಅದಕ್ಕೆಲ್ಲ ನಾಳೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ಇವತ್ತು ಅವಕಾಶ ಮಾಡಿಕೊಡಿ ಸರ್.

ಶ್ರೀ ವಾಟಾಳ್ ನಾಗರಾಜ್: ಇವತ್ತು ಅವಕಾಶ ಕೊಟ್ಟುಬಿಡಿ ಸರ್.

ಶ್ರೀ ಬಿ.ಎಸ್.ಯಡಿಯೂರಪ್ಪ: ಇವತ್ತೆ ಶೂನ್ಯ ವೇಳೆಯಲ್ಲಿ ಮಾತನಾಡ ಬೇಕಾದ ಮಹತ್ವದ ವಿಷಯ ಇರುತ್ತದೆ.

ಅಧ್ಯಕ್ಷರು: ವಿಷಯ ಮಂಡನೆ ಆಗಿದೆ. ನಾಳೆ ತಮಗೆ ಅವಕಾಶ ಕೊಡೋಣ.

ಶ್ರೀ ವಾಟಾಳ್ ನಾಗರಾಜ್: ಗಂಭೀರವಾದ ವಿಷಯವಿರುವುದರಿಂದ ಇವತ್ತೆ ಅವರಿಗೆ ಅವಕಾಶ ಕೊಡಿ ಸರ್.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇವತ್ತೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ ಸರ್.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರಿಗೆ ಅವಕಾಶ ಕೊಡಿ ಸರ್. ಅದಕ್ಕೇನಂತೆ.

ಅಧ್ಯಕ್ಷರು: ಆಯಿತು. ಅವಕಾಶ ಕೊಡುತ್ತೇನೆ. ಈಗ ಎರಡು ಅಥವಾ ಮೂರು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ಎಲ್ಲದನ್ನೂ ಇವತ್ತು ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾಳೆ ಸ್ವಲ್ಪ ನಾಡಿದ್ದು ಸ್ವಲ್ಪ ಹೀಗೆ ಎಲ್ಲರಿಗೆ ಅವಕಾಶ ಕೊಡುತ್ತೇನೆ. ದಯಮಾಡಿ ಎಲ್ಲರು ಸಹಕರಿಸಬೇಕು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ:–

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ):– ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಕೋಲಾರ ಜಿಲ್ಲೆಯ ಶಿಡ್ಲಘಟ್ಟದಲ್ಲಿ ಒಂದು ಅಮಾನವೀಯ ಮತ್ತು ಇಡೀ ನಾಗರಿಕ ಸಮಾಜ, ನಾವೆಲ್ಲರೂ ತಲೆತಗ್ಗಿಸಬೇಕಾದಂಥ ಘಟನೆ ದಿ:18–06–05ರಂದು ನಡೆದಿದೆ. ಸುಮಾರು 12 ಗಂಟೆ ಸಮಯದಲ್ಲಿ ಹೈಸ್ಕೂಲ್ ವಿದ್ಯಾರ್ಥಿನಿಯೊಬ್ಬಳು ತನ್ನ ಮಾರ್ಕ್ಸ್‌ಕಾರ್ಡ್ ಮತ್ತು ಟಿ.ಸಿ. ತೆಗೆದುಕೊಳ್ಳಲು ಶಾಲೆ ಆವರಣಕ್ಕೆ ಹೋಗಿ ಕುಳಿತಿದ್ದಾಳೆ. ಅಲ್ಲಿಗೆ ಬಂದಂಥ ಒಬ್ಬ ಹುಡುಗನ ಜೊತೆ ಮಾತನಾಡುತ್ತಾ ಕುಳಿತಿದ್ದಾಳೆ. ಅಲ್ಲಿಗೆ ಅಮ್ಜಾದ್ ಎನ್ನುವ ಒಬ್ಬ ಹುಡುಗ ಬಂದು ಮದುವೆಯಾಗದಿರುವ ಹುಡುಗಿ ಇನ್ನೊಬ್ಬ ಗಂಡಸಿನ ಜೊತೆ